ದಿನಾಂಕ **16-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ. ಟಿ.ವಿ. ವಿ. ಆರೋಪ ಪರ ವಕೀಲರಿಂದಃ-**

17. ತೆರಿಗೆ ಪಾವತಿಯ ಸಂಖ್ಯೆ ಏನು ಎಂದರೆ ಸಾಕ್ಷಿಯು ತನ್ನ ಪ್ಯಾಕೇಟ್ ನಿಂದ ಒಂದು ದಾಖಲೆಯನ್ನು ತೆಗೆದು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ . ಸದರಿ ದಾಖಲೆಯನ್ನು ಹಾಗೆಯೇ ಕಡತದಲ್ಲಿ ಇರಿಸಲಾಗಿದೆ.

18. ಸರ್ಕಾರಕ್ಕೆ ಎಷ್ಟು ತೆರಿಗೆ ಪಾವತಿ ಮಾಡುತ್ತೀರಿ ಎಂದರೆ ಸಾಕ್ಷಿಯು 3-4 ಸಾವಿರ ಎನ್ನುತ್ತಾರೆ. ನಿಮಗೆ ಬಂದ ಆದಾಯವನ್ನು ಬಿಟ್ಟು ನೀವು 3-4 ಸಾವಿರ ತೆರಿಗೆ ಪಾವತಿ ಮಾಡುತ್ತೀರಿ ಎಂದರೆ ಸರಿ. ಯಾವ ಮೂಲದಿಂದ ಎಷ್ಟು ಆದಾಯ ಬರುತ್ತದೆ ಎಂದು ನೀವು ಅದರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಲ ಕೊಟ್ಟಿದ್ದರ ಬಗ್ಗೆ ಮತ್ತು ಪಡೆದಿದ್ದರ ಬಗ್ಗೆ ಅದರಲ್ಲಿ ನಮೂದು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿಯು 50-60 ಸಾವಿರ ಎನ್ನುತ್ತಾರೆ.

19. ನಿಮ್ಮ ತಿಂಗಳು ಖರ್ಚು ಎಷ್ಟು ಎಂದರೆ 30 ಸಾವಿರ ಎನ್ನುತ್ತಾರೆ. ಇದನ್ನು ತೆರಿಗೆ ಪಾವತಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎನ್ನುತ್ತಾರೆ. ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇರಲಿಲ್ಲ ಎನ್ನುತ್ತಾರೆ.

20. ನಮ್ಮದು ನೀರಾವರಿ ಜಮೀನು ಇದೆ. 2017 ರಲ್ಲಿ ಯಾವ ಬೆಳೆ , ಯಾವ ತಿಂಗಳಿನಲ್ಲಿ ಇಟ್ಟಿದ್ದು ಎಂದರೆ ಸಾಕ್ಷಿಯು ಫೆಬ್ರವರಿ ನಲ್ಲಿ ಟಮೇಟೋ ಬೆಳೆ ಹಾಕಿದ್ದೇವು ಎನ್ನುತ್ತಾರೆ. ಬೆಳೆ ಬಂದಿದ್ದು ಮಾರ್ಚ್-ಏಪ್ರಿಲ್ ನಲ್ಲಿ. ಬೆಳೆಯನ್ನುನಾನು ಎ. ಪಿ. ಎಂ. ಸಿ. ಮಾರುಕಟ್ಟೆಗೆ

ಹಾಕುತ್ತೇನೆ. ಆ ರೀತಿ ಮಾರುಕಟ್ಟೆಗೆ ಹಾಕಿದರೆ ಬಿಲ್ ಕೊಡುತ್ತಾರೆ ಎಂದರೆ ಸರಿ. ಇದಕ್ಕೆ ಸಂಬಂಧವಾಗಿ ನೀವು ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ.

21. ನಿಮಗೆ ಜಮೀನು ಇಲ್ಲ, ಆದ್ದರಿಂದ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನಿಮಗೆ 2 ಲಕ್ಷ ರೂ ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮತ್ತು ನಿಮ್ಮ ತಂದೆಯ ಹೆಸರಿನಲ್ಲಿ ಯಾವುದೇ ದಾಖಲಾತಿ ಇಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

22. ಲಕ್ಷ ವ್ಯವಹಾರ ಮಾಡಬೇಕೆಂದರೆ ಒಬ್ಬ ವ್ಯಕ್ತಿಯನ್ನು ಮುಂದೆ ಇಟ್ಟುಕೊಂಡು ವ್ಯವಹಾರ ಮಾಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇದ್ದಾರೆ ಎನ್ನುತ್ತಾರೆ. ಅವರು ಯಾರು ಎಂದರೆ ಸಾಕ್ಷಿಯು ಸೋಣ್ಣಪ್ಪ ರೆಡ್ಡಿ ಮತ್ತು ಶ್ರೀರಾಮಪ್ಪ ಎನ್ನುತ್ತಾರೆ. ಆ ಶ್ರೀರಾವಪ್ಪ ರವರ ಊರು ದೊಡ್ಡ ಗಂಜೂರು ಎಂದರೆ ಸರಿ.

23. ಆರೋಪಿ ಹುಟ್ಟಿದಾಗಿನಿಂದಲೂ ದೊಡ್ಡಗಂಜೂರು ಗ್ರಾಮದಲ್ಲಿ ಇರುವುದು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಶ್ರೀರಾಮಪ್ಪ ಸೇರಿ ಈ ಪ್ರಕರಣವನ್ನು ಸೃಸ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

24. ನಾನು ಕೊಟ್ಟಿರುವ ನೋಟೀಸು ಜಾರಿಯಾಗಿರುತ್ತದೆ. ಸಾಕ್ಷಿಗೆ ತನ್ನ ಮುಖಾಂತರ ಗುರುತಾದ ನಿಶಾನೆಗಳನ್ನು ತೋರಿಸಿ ಇದರಲ್ಲಿ ಅದು ಯಾವ ದಾಖಲೆ ಎಂದರೆ ಸಾಕ್ಷಿಯು ಅವುಗಳನ್ನು ತೆಗೆದುಕೊಂಡು , ಕೈಗಳಲ್ಲಿ ಹಿಡಿದು , ತಿರುವಿ ನೋಡಿ , ಅದರಲ್ಲಿ ಇಲ್ಲ ಎನ್ನುತ್ತಾರೆ.

25. ನಾನು , ಶ್ರೀರಾಮಪ್ಪ ಮತ್ತು ದೊಡ್ಡಗಂಜೂರು ಅಂಚೆ ಇಲಾಖೆಯವರು ಸೇರಿ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿಗಳನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ.

26. ಆರೋಪಿ ಈ ನ್ಯಾಯಾಲಯಕ್ಕೆ ಬರುವವರೆಗೂ ನಿಮ್ಮ ಮುಖ ನೋಡಿಲ್ಲ ಎಂದರೆ ಸರಿಯಲ್ಲ. ನಿಮಗೂ ಮತ್ತು ಆರೋಪಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ.

27. ಆರೋಪಿಗೆ ಇಂಗ್ಲೀಷ್ ಬರುತ್ತಾ ಇಲ್ಲವೋ ಎಂದು ನಾನು ತಿಳಿದುಕೊಂಡಿಲ್ಲ. ಆರೋಪಿಗೆ ಕನ್ನಡದಲ್ಲಿ ಬರುತ್ತಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬರೆದಿರುವ ಬರವಣಿಗೆಯನ್ನು ಆರೋಪಿ ಬರೆದಿಲ್ಲ ಎಂದರೆ ಸಾಕ್ಷಿಯು ಅವರೇ ಬರೆದುಕೊಟ್ಟಿದ್ದು ಎನ್ನುತ್ತಾರೆ.ನ ಯಾರ ಮುಂದೆ ಬರೆದುಕೊಟ್ಟಿದ್ದು ಎಂದರೆ ಸಾಕ್ಷಿಯು ಶ್ರೀರಾಮಪ್ಪ ಮತ್ತು ಸೋಣ್ಣಪ್ಪ ರೆಡ್ಡಿ ರವರ ಮುಂದೆ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ.

28. ಶ್ರೀರಾವಪ್ಪ ರವರ ಅಂಗಡಿಗೆ ಆರೋಪಿ ಹೋಗಿದ್ದು , ಅವರ ಅಂಗಡಿಯಲ್ಲಿ ಆರೋಪಿ ಬ್ಯಾಗ್ ನ್ನು ಮರೆತ್ತಿದ್ದರು , ಅದರಲ್ಲಿರುವ ದಾಖಲಾತಿಗಳನ್ನು ನೀವು ಪಡೆದು ದುರುಪಯೋಗ ಪಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.ನಿಪಿ –1 ಎ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಿಪಿ –1 ರಲ್ಲಿರುವ ಬರವಣಿಗೆ ಆರೋಪಿಯದಲ್ಲ ಎಂದರೆ ಸರಿಯಲ್ಲ.

29. ಸಾಕ್ಷಿಗೆ ವಕಾಲತ್ ನ್ನು ಮತ್ತು ನಿಪಿ 1 ನ್ನು ತೋರಿಸಲಾಗಿ , ಅದರಲ್ಲಿರುವ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಮೋಸ ಮಾಡಿರುತ್ತಾರೆ ಎಂದು ನುಡಿದು ನಂತರದಲ್ಲಿ ವ್ಯತ್ಯಾಸ ಇದೆ ಎನ್ನುತ್ತಾರೆ.

30. ಆರ್ ಬಿ ಐ ರವರು ಹಳೆಯ ಚೆಕ್ಕುಗಳನ್ನು ಬ್ಯಾನ್ ಮಾಡಿರುತ್ತಾರೆ ಎಂಬ ವಿಷಯ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಪ್ರಯತ್ನ ಮಾಡಿರುತ್ತೇನೆ ಎನ್ನುತ್ತಾರೆ. ಹಳೆಯಚೆಕ್ಕುಗಳಿದ್ದರೆ ಬ್ಯಾಂಕ್ ನಿಂದ ಹಿಂಬರಹ

ಕೊಡುವುದಿಲ್ಲ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿಯು ನಾನು ಕೇಳಿಲ್ಲ ಎನ್ನುತ್ತಾರೆ. ನಿಪಿ 2 ನ್ನು ನಾನು ಮತ್ತು ಶ್ರೀರಾಮಪ್ಪರವರು ಬ್ಯಾಂಕ್ ನಲ್ಲಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

31. ಬ್ಯಾಂಕ್ ನವರು ಹಿಂಬರಹವನ್ನು ಕೈ ಬರವಣಿಗೆ ಮುಖಾಂತರ ಕೊಡುವುದಿಲ್ಲ ಸಿ ಟಿ ಎಸ್ ಮುಖಾಂತರ ಕೊಡುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.